**ಕರ್ನಾಟಕ ಸರ್ಕಾರ**

ಕರ್ನಾಟಕ ಸರ್ಕಾರದ ಸಚಿವಾಲಯ,

ವಿಧಾನ ಸೌಧ,

ಬೆಂಗಳೂರು, ದಿನಾಂಕ 9ನೇ ಸೆಪ್ಟಂಬರ್ 1980.

ಕ್ರಮಾಂಕ : ಡಿಪಿಎಆರ್ 36 ಪಿಒಎಲ್ 80

**ಅಧಿಕೃತ ಜ್ಞಾಪನಪತ್ರ**

ವಿಷಯ :- ಕರ್ನಾಟಕ ರಾಜ್ಯಶಾಸನ ಸಭೆಗಳಿಗೆ ಒದಗಿಸುವ/ ಮಂಡಿಸುವ ಎಲ್ಲ ಬಿಲ್ಲುಗಳು, ಮಸೂದೆಗಳು, ಇಲಾಖಾ ವಾರ್ಷಿಕ ಆಡಳಿತ ವರದಿಗಳು, ಇಲಾಖಾ ವಾರ್ಷಿಕ ವರದಿಗಳು, ಆಯವ್ಯಯ ದಾಖಲೆಗಳು ಮುಂತಾದವುಗಳನ್ನು ಕನ್ನಡ ಮತ್ತು ಇಂಗ್ಲೀಷ್ ಎರಡೂ ಭಾಷೆಗಳಲ್ಲಿ ಪ್ರಕಟಿಸಲು ಆದೇಶ.

ಉಲ್ಲೇಖ : ಸರ್ಕಾರದ ಅಧಿಸೂಚನೆಗಳ ಕ್ರಮಾಂಕ :-

1) ಡಿಪಿ.ಎ.ಆರ್ 1 ಪಿ.ಒ.ಎಲ್ 79 ದಿನಾಂಕ 6.9.1979

2) ಡಿಪಿ.ಎ.ಆರ್ 29 ಪಿ.ಒ.ಎಲ್ 79 ದಿನಾಂಕ 4.3.1980

ದಿನಾಂಕ 1ನೇ ನವೆಂಬರ್ 1979ರಿಂದ ಕನ್ನಡವನ್ನು ರಾಜ್ಯ ಸರ್ಕಾರದ ಆಡಳಿತ ಭಾಷೆಯಾಗಿ ಜಾರಿಗೆ ತರಲಾಗಿದೆ. ಪ್ರಯುಕ್ತ ದಿನಾಂಕ 1ನೇ ನವೆಂಬರ್ 1979 ರಿಂದೀಚೆಗೆ ರಾಜ್ಯ ಸರ್ಕಾರದ ಆಡಳಿತವೆಲ್ಲವೂ ಕನ್ನಡದಲ್ಲೇ ನಡೆಯಬೇಕೆಂಬುದು ಸರ್ಕಾರದ ತೀವ್ರ ಉದ್ದೇಶವಾಗಿದೆ. ಆದುದರಿಂದ ಇನ್ನು ಮುಂದೆ ಕರ್ನಾಟಕ ರಾಜ್ಯದ ಶಾಸನ ಸಭೆಗಳಲ್ಲಿ ಮಂಡಿಸುವ/ ಒದಗಿಸುವ ಎಲ್ಲ ಬಿಲ್ಲುಗಳನ್ನು, ಮಸೂದೆಗಳನ್ನು, ಎಲ್ಲ ಇಲಾಖೆಯ ವಾರ್ಷಿಕ ವರದಿಗಳನ್ನು ಸರ್ಕಾರದ ಹೇಳಿಕೆಗಳು, ಪ್ರಶ್ನೆಗಳಿಗೆ ಉತ್ತರ ಮುಂತಾದವುಗಳನ್ನು ಹಾಗೂ ಯಾವುದೇ ಕಲಾಪಗಳಿಗೆ ಸಂಬಂಧಿಸಿದ ಟಿಪ್ಪಣಿಗಳನ್ನು ಕನ್ನಡದಲ್ಲೇ ತಯಾರಿಸಿ ಶಾಸನ ಸಭೆಗಳಲ್ಲಿ ಮಂಡಿಸುವುದು/ ಒದಗಿಸುವುದು ಸಂಬಂಧಪಟ್ಟ ಎಲ್ಲರ ಕರ್ತವ್ಯವಾಗಿದೆ. ಹೀಗೆ ಕನ್ನಡದಲ್ಲಿ ತಯಾರಿಸಿದ ಪ್ರತಿಯೊಂದು ಮಸೂದೆ, ಬಿಲ್ಲುಗಳು, ವರದಿಗಳು, ಹೇಳಿಕೆಗಳೆಲ್ಲವನ್ನು ಸಹ ಇಂಗ್ಲೀಷಿಗೆ ಭಾಷಾಂತರಿಸಿ ಕನ್ನಡ ಮತ್ತು ಇಂಗ್ಲೀಷ್ ಎರಡೂ

ಭಾಷೆಗಳ ಪ್ರತಿಗಳನ್ನು ತಪ್ಪದೆ ಒದಗಿಸಬೇಕೆಂದೂ ಈ ಮೂಲಕ ಸಂಬಂಧಿಸಿದ ಎಲ್ಲರಿಗೂ ಆದೇಶಿಸಲಾಗಿದೆ.

ಸರ್ಕಾರದ ಎಲ್ಲ ಕಾರ್ಯದರ್ಶಿಗಳು ಸಹ ಮೇಲಿನ ಆದೇಶವನ್ನು ತಕ್ಷಣದಿಂದ ಜಾರಿಗೆ ತರಲು ತೀವ್ರಕ್ರಮ ತೆಗೆದುಕೊಳ್ಳಬೇಕೆಂದು ಪ್ರಾರ್ಥಿಸಲಾಗಿದೆ. ಅಲ್ಲದೆ ಈ ವಿಷಯದಲ್ಲಿ ತಮ್ಮ ಆಡಳಿತಕ್ಕೊಳಪಡುವ ಎಲ್ಲ ಇಲಾಖೆಗಳಿಗೂ ಮತ್ತು ಅಧಿಕಾರಿಗಳಿಗೂ ಸೂಕ್ತ ಹಾಗೂ ಕಟ್ಟುನಿಟ್ಟಾದ ಆದೇಶವನ್ನು ನೀಡಬೇಕೆಂದು ಎಲ್ಲ ಕಾರ್ಯದರ್ಶಿಗಳನ್ನು ಕೋರಲಾಗಿದೆ.

ಸರ್ಕಾರದ ಹಾಗೂ ಶಾಸನ ಸಭೆಯ ಎಲ್ಲ ವ್ಯವಹಾರ ಹಾಗೂ ಕಲಾಪಗಳನ್ನು ರಾಜ್ಯ ಭಾಷೆಯಾದ ಕನ್ನಡದಲ್ಲೇ ನಡೆಸಲು ಪ್ರತಿಯೊಬ್ಬರ ಸಹಕಾರವನ್ನು ಸಹ ಕೋರಲಾಗಿದೆ.

**ರ. ಆನಂದಕೃಷ್ಣ**
ಮುಖ್ಯ ಕಾರ್ಯದರ್ಶಿಗಳು